## <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>

## <u>ಸಿಸಿ ನಂಬರ್ 1078/2023</u>

<u>ಫಿರ್ಯಾದಿ</u> ರಾಕೇಶ ತಂದೆ ಪಿಲಿಪ ಪಿಂಟೋ

ವಿರುದ್ದ

<u>ಆರೋಪಿ</u> ಕೊಟ್ರೇಶಪ್ಪ ತಂದೆ ಫಕ್ಕೀರಪ್ಪ ಕರಿದ್ಯಾಮಣ್ಣನವರ

### <u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ</u>

ಪ್ರಶ್ನೆ.-1 ಈ ಪ್ರಕರಣದಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷವನ್ನು ನೀವು ತಿಳಿದುಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ.-2 ಪ್ರಾಸಾ-1/ಪಿರ್ಯಾದಿರವರು ತಮ್ಮ ಸಾಕ್ಷಿಯಲ್ಲಿ ಆರೋಪಿಯಾದ ನೀವು ಪಿರ್ಯಾದಿಗೆ ಬಹಳ ವರ್ಷಗಳಿಂದ ಪರಿಚಯಸ್ಥರಾಗಿದ್ದು, ನಿಮ್ಮ ಮನೆತನದ ಅಡಚಣೆಯ ಸಲುವಾಗಿ ಪಿರ್ಯಾದಿಯಿಂದ ದಿನಾಂಕಃ 01.01.2022 ರಂದು ರೂ.5,00,000/- ಸಾಲವನ್ನು ಪಡೆದುಕೊಂಡಿದ್ದು, 6 ತಿಂಗಳೊಳಗಾಗಿ ಮರುಪಾವತಿ ಮಾಡುವದಾಗಿ ಒಪ್ಪಿ ಕೈಗಡ ಸಾಲವನ್ನು ಪಡೆದಿದ್ದಾರೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-3 ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 6 ತಿಂಗಳ ನಂತರ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದಾಗ ಆರೋಪಿಯಾದ ನೀವು ಕೆನರಾ ಬ್ಯಾಂಕ್, ಹಾವೇರಿ ಶಾಖೆ ಚೆಕ್ಕ ನಂಬರಃ 502125 ನೇದ್ದನ್ನು ಪಿರ್ಯಾದಿಯ ಹೆಸರಿಗೆ ದಿನಾಂಕಃ 18.07.2022 ರಂದು ರೂ.5,00,000/- ಎಂದು ನಮೂದಿಸಿ, ಚೆಕ್ಕನ್ನು ನೀಡಿದ್ದಾರೆ ಎಂದು ಸಾಕ್ಷವನ್ನು ನುಡಿದು, ಚೆಕ್ಕನ್ನು ನಿ.ಪಿ-1 ಎಂದು ಗುರುತಿಸಿಕೊಂಡಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-4 ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದಿಯು ತನ್ನ ಕೆನರಾ ಬ್ಯಾಂಕ್, ಹಾವೇರಿ ಶಾಖೆಯಲ್ಲಿ ನಗಧೀಕರಣಕ್ಕೆ ಚೆಕ್ಕನ್ನು ದಿನಾಂಕಃ 18.07.2022 ರಂದು ಹಾಜರುಪಡಿಸಿದ್ದು, ಸದರಿ ಚೆಕ್ಕು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಅನಾಧಾರಣಗೊಂಡು ಅದೇ ಹಿಂಬರಹದೊಂದಿಗೆ ದಿನಾಂಕಃ 18.07.2022 ರಂದು

ವಾಪಾಸಾಗಿರುತ್ತದೆ ಎಂದು ಸಾಕ್ಷವನ್ನು ನುಡಿದು, ಬ್ಯಾಂಕಿನ ಹಿಂಬರಹವನ್ನು ನಿ.ಪಿ-2 ಎಂದು ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ 5 ಪ್ರಾ.ಸಾ-1 ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಆರೋಪಿಯಾದ ನಿಮಗೆ ಚೆಕ್ಕು ಅನಾಧಾರಣಗೊಂಡ ಬಗ್ಗೆ ತಿಳಿಸಿದರೂ, ಯಾವುದೇ ಪ್ರತಿಕ್ರಿಯೆ ನೀಡಿರುವದಿಲ್ಲ, ನಂತರ ದಿನಾಂಕಃ 08.08.2022 ರಂದು ವಕೀಲರ ಮೂಲಕ ನೋಟಿಸನ್ನು ನೊಂದಣಿ ಅಂಚೆ ಮೂಲಕ ನೋಟಿಸ ನೀಡಿದ್ದು, ನೋಟಿಸನ್ನು ಸ್ವೀಕರಿಸದೇ ವಾಪಾಸು ಮಾಡಿದ್ದಾರೆ. ನೋಟಿಸ ನೀಡಿರುವ ವಿಷಯ ಗೊತ್ತಿದ್ದರೂ, ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವದಿಲ್ಲ ಅಥವಾ ಮರುತ್ತರವನ್ನು ನೀಡಿರುವದಿಲ್ಲ, ಆರೋಪಿ ತನ್ನ ಖಾತೆಯಲ್ಲಿ ಸಾಕಷ್ಟು ಹಣವನ್ನು ಜಮಾ ಮಾಡದೇ ಮೋಸ ಮಾಡಿದ್ದು, ಆ ಕಾರಣ ಈ ದೂರನ್ನು ದಾಖಲಿಸಲಾಗಿದೆ ಎಂದು ಸಾಕ್ಷವನ್ನು ನುಡಿದು, ನೋಟಿಸಿನ ಪ್ರತಿಯನ್ನು ನಿ.ಪಿ-3 ಎಂದು, ಅಂಚೆ ರಶೀದಿಯನ್ನು ನಿ.ಪಿ-4, ಅಂಚೆ ಸ್ವೀಕೃತಿ ಪತ್ರವನ್ನು ನಿ.ಪಿ-5 ಎಂದು ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-6 ನೀವು ಏನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ.-7 ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುತ್ತೀರಾ?

ಉತ್ತರಃ

(ಮೇಲೆ ಹೇಳಿದ ಆರೋಪಿಯ ಹೇಳಿಕೆಗಳನ್ನು ಅವರಿಗೆ ಗೊತ್ತಿರುವ ಭಾಷೆಯಲ್ಲಿ ಅವರಿಗೆ ಓದಿ ಹೇಳಲಾಯಿತು ಮತ್ತು ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

ಹಾವೇರಿ.
ದಿನಾಂಕಃ**03.02.2025**

**(ಪ್ರಕಾಶ.ವಿ)**
**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**